ಮುಂಜಾವು

ವಾರಪತ್ರಿಕೆ.

ಸಂಪಾದಕರು: ನಿಡಿಮನೆ ನಾಗರಾಜ

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೧೯

ಸಂಪುಟ ೧ ಸಂಚಿಕೆ ೩೩ ಕೊಪ್ಪ ೧೩-೨-೧೯೮೩ ಭಾನುವಾರ ಬೆಲೆ ೪೦ ಪೈಸೆ

ಅಧಿಕಾರಿಗಳ ಅನಿಷ್ಟತನಕ್ಕೆ ಮದ್ದು!

ಕೊಪ್ಪ: ಸರ್ಕಾರಿ ವಾಹನಗಳನ್ನು ಅಧಿಕಾರಿಗಳು ಸ್ವಂತ ಕೆಲಸಗಳಿಗೆ ಬಳಸಿಕೊಳ್ಳುವುದು, ಕಚೇರಿ ವೇಳೆಯಲ್ಲಿ ಸ್ವಂತ ಕೆಲಸಗಳಿಗಾಗಿ ಪೇಟೆ ಮುಂತಾದ ಕಡೆಗೆ ಹೋಗುವುದು ಕಳ್ಳ ಸಾಗಣೆ, ಅಕ್ರಮ ದಾಸ್ತಾನು ಇತ್ಯಾದಿಗಳಲ್ಲಿ ಅಧಿಕಾರಿಗಳ ಶಾಮೀಲು - ಮುಂತಾದ ಅನಿಷ್ಟಗಳ ವಿರುದ್ಧ ಈ ತಾಲೂಕಿನ ಹಿರಿಯ ಜನತಾ ಸದಸ್ಯ ಎ.ಬಿ.ನಾಗಪ್ಪ ಮತ್ತು ಸಂಗಡಿಗರು ತೀವ್ರ ಕಾರ್ಯಾಚರಣೆ ಆರಂಭಿಸಿದ್ದಾರೆ.

ಫೆ. ೯ರಂದು ಅಂಗನವಾಡಿ ಯೋಜನೆ [illegible] ವಾಹನ ರಾತ್ರಿ ಎಂಟರ ಹೊತ್ತಿಗೆ ಪೇಟೆ [illegible] ನಿಂತಿದ್ದುದನ್ನು ಕಂಡು, ವಿಚಾರಿಸಲಾಗಿ ಅಧಿಕಾರಿಗಳು ಕಾಫಿ ಕುಡಿಯಲು ಪೇಟೆಗೆ ಬಂದಿದ್ದಾರೆಂದು ತಿಳಿದು ಕೂಡಲೇ ವಾಹನವನ್ನು ಶೆಡ್ಡಿಗೆ ಬಿಟ್ಟುಬರುವಂತೆ ನಾಗಪ್ಪ "ಆಜ್ಞೆ" ಮಾಡಿದರು.

"ಪೆಟ್ರೋಲ್"ಗಳ ತಮ್ಮ ಕೋಟಾವನ್ನು ಅಧಿಕಾರಿಗಳು ಈ ರೀತಿಯಲ್ಲಿ ತಿಂಗಳ ೧೫ರೊಳಗೇ ಖರ್ಚು ಮಾಡಿ, ಅನಂತರ ಹಳ್ಳಿಗಳಿಗೆ ಭೇಟಿ ಕೊಡಲು ಕರೆದರೆ 'ಪೆಟ್ರೋಲಿಲ್ಲ' ಎಂದು ಸಬೂಬು ನೀಡುತ್ತಾರೆ. ಸಾರ್ವಜನಿಕರ ಬಳಕೆಗೆ ತೈಲ ಸಿಗುತ್ತಿದ್ದರೂ ಇವರ ಸ್ವಂತ ಬಳಕೆಗಾಗಿ ಕಾದಿರಿಸಬೇಕಾದ ಪರಿಸ್ಥಿತಿಯಿದೆ" ಎಂದು ನಾಗಪ್ಪ 'ಮುಂಜಾವು'ಗೆ ತಿಳಿಸಿದರು.

ಶೃಂಗೇರಿ ಬಳಿ 'ಸಾಹಸ'

ಹಳೆಯ ರಹದಾರಿಯೊಂದನ್ನು ಬಳಸಿ ಅವ್ಯಾಹತವಾಗಿ ಭತ್ತವನ್ನು ಕನ್ನಡ ಜಿಲ್ಲೆಗೆ ಸಾಗಿಸುತ್ತಿದ್ದ ಆಪಾದನೆ ಮೇಲೆ ಹರಿಹರಪುರದ ಗೋಪಾಲನಾಯಕ್ ಹಾಗೂ ಕೊಪ್ಪದ ಭಾರತ್ ಪ್ರಾವಿಜನ್ ಸ್ಟೋರ್ಸ್‌ಗೆ ಸೇರಿದ ಎರಡು ಲಾರಿಗಳನ್ನು ಕೆರೆಕಟ್ಟೆ ಅರಣ್ಯ ತನಿಖಾ ಗೇಟಿನಾಚೆ ಫೆ. ೮ರಂದು ನಾಗಪ್ಪ ಮತ್ತು ಬೆಂಬಲಿಗರು ತಡೆದು ಶೃಂಗೇರಿ ಪೋಲೀಸರಿಗೆ ಒಪ್ಪಿಸಿದ್ದಾರೆ. ಇದಕ್ಕೆ ಶೃಂಗೇರಿ ತಹಸೀಲ್ದಾರರೇ ಕಳ್ಳ ಸಾಗಣೆದಾರರೊಂದಿಗೆ ಶಾಮೀಲಾಗಿದ್ದಾರೆಂದು ನಾಗಪ್ಪ ಆಪಾದಿಸಿದ್ದಾರೆ. ಕಳ್ಳ ಸಾಗಾಣಿಕೆ ಹೀಗೇ ಮುಂದುವರಿದರೆ ತಾನೇ ಲಾರಿಗಳನ್ನು ತಡೆದು ಆಹಾರ ಧಾನ್ಯಗಳನ್ನು ಬಡಬಗ್ಗರಿಗೆ ಹಂಚಿ ಬಿಡುವುದಾಗಿ ಎಚ್ಚರಿಸಿದ್ದಾರೆ.

ಚಳುವಳಿಯಾಗಲಿ

ನಾಗಪ್ಪ ಅವರ ಈ ತರದ ಚಟುವಟಿಕೆ ಅಧಿಕಾರದ ಜನತಾ ಪಕ್ಷದವರ ಒಂದು "ಸ್ಟಂಟ್" ಎಂದು ಕರೆಸಿಕೊಂಡು ಇಲ್ಲಿಗೇ ನಿಂತು ಹೋಗದೆ ಅವ್ಯಾಹತವಾಗಿ ಮುಂದುವರಿಯಲಿ ಹಾಗೂ ಯಶಸ್ವಿಯಾಗಲಿ ಎಂದು ಎಲ್ಲರ ಆಸೆ.

ಬಡವನ ೪ ಹಸುಗಳು 'ಸರ್ಕಾರಿ' ಹುಲಿಗೆ ತುತ್ತು

(ನಮ್ಮ ಪ್ರತಿನಿಧಿಯಿಂದ)

ಬಿದರಗೋಡು: ಇಲ್ಲಿಗೆ ಸಮೀಪದ ಬೀಳಗೋಡು ಕೊಡಿಗೆ ಎಂಬಲ್ಲಿ ತಮ್ಮೇಗೌಡ ಎಂಬ ಗಿರಿಜನ ಕೃಷಿ ಕಾರ್ಮಿಕನ ೩ ದನಗಳನ್ನು ಹುಲಿ ಸಾಯಿಸಿದ್ದು ಇನ್ನೊಂದನ್ನು ತೀವ್ರ ಗಾಯಗೊಳಿಸಿದೆಯೆಂದೂ ಅರಣ್ಯ ಇಲಾಖೆ ಅಧಿಕಾರಿಗಳು ಮಹಜರು ಮಾಡಿದ್ದಾರೆಂದೂ ತಿಳಿದು ಬಂದಿದೆ. ಸರ್ಕಾರವೇ ಈ ಸರಹದ್ದಿಗೆ ತಂದು ಬಿಟ್ಟ ಹುಲಿ ಇದೆಂದು ಹೇಳಲಾಗಿದ್ದು, ಅಲ್ಪಸ್ವಲ್ಪ ಪರಿಹಾರಕ್ಕೆ ಕಾದಿರಬೇಕಾಗಿದೆ. (ಅದನ್ನು ಪಡೆಯಲೂ ಎಷ್ಟು ಅಲೆತ! ಎಷ್ಟು ಅಲೆತ!) ಸರ್ಕಾರವೇ ನಾಲ್ಕು ಹಸುಗಳನ್ನು ಒದಗಿಸಲಿ ಎಂಬುದು ತಮ್ಮೇಗೌಡನ ಕೋರಿಕೆಯಾಗಿದೆ ಎಂದು ಹಾಡಿಯ ಮುಖಂಡರೊಬ್ಬರು 'ಮುಂಜಾವು'ಗೆ ತಿಳಿಸಿದ್ದಾರೆ.

ಈ ಹುಲಿಗಳ ಹಾವಳಿಯನ್ನು ತಡೆಯಲು ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ಕ್ರಮ ತೆಗೆದುಕೊಳ್ಳಬೇಕಾಗಿದೆ.

'ಮುಂಜಾವು'

ಚಂದಾ ದರ: ಆಜೀವ ಚಂದಾ ೨೦೦ ರೂ;
ವಾರ್ಷಿಕ ಚಂದಾ ೨೦ ರೂ;

ಅಂಚೆ ನೌಕರರ ಸಭೆ

ಕೊಪ್ಪ: ಅಖಿಲ ಭಾರತ ಅಂಚೆ ನೌಕರರ ಸಂಘ, ಕೊಪ್ಪ ಶಾಖೆಯ ಕಾರ್ಯಕಾರಿ ಸಮಿತಿಯ ಮಾಹೆಯಾನ ಜಂಟಿ ಸಭೆ ಫೆ. ೬ರಂದು ನಡೆದು ಸಂಘದ ೧೯೮೩ರ ದ್ವಿತೀಯ ವಾರ್ಷಿಕ ಮಹಾ ಅಧಿವೇಶನವನ್ನು ಏಪ್ರಿಲ್ ಮೊದಲ ವಾರ ನಡೆಸಲು ತೀರ್ಮಾನಿಸಲಾಯಿತು. ಸ್ವಾಗತ ಸಮಿತಿ ಮತ್ತು ವಿವಿಧ ಉಪಸಮಿತಿಗಳನ್ನು ರಚಿಸಲಾಯಿತು. ಅಧಿವೇಶನಕ್ಕೆ ಶಾಸಕ ಗೋವಿಂದ ಗೌಡರನ್ನು ಆಹ್ವಾನಿಸಲೂ ನಿರ್ಧರಿಸಲಾಯಿತು.

ವಿಜಯೋತ್ಸವ

ಜಯಪುರ: ಮೇಗುಂದ ಹೋಬಳಿಯ ಜನತಾ ಪಕ್ಷದ ಕಾರ್ಯಕರ್ತರು ಫೆ. ೭ರಂದು ಇಲ್ಲಿ ವಿಜಯೋತ್ಸವ ಆಚರಿಸಿ, ಶಾಸಕ ಹೆಚ್.ಜಿ.ಗೋವಿಂದ ಗೌಡರನ್ನು ಊರಿನಲ್ಲಿ ಮೆರವಣಿಗೆಯಲ್ಲಿ ಕರೆದೊಯ್ದರು.

ತಾವು ನಿಷ್ಠೆಯಿಂದ ಕೆಲಸ ಮಾಡುವುದಾಗಿಯೂ, ಆಗಾಗ್ಗೆ ಕ್ಷೇತ್ರದಲ್ಲಿ ಸಂಚರಿಸಿ ಜನರ ಕುಂದು ಕೊರತೆಗಳ ಬಗ್ಗೆ ಅಧಿಕಾರಿಗಳಿಂದ ಹಾಗೂ ಸರ್ಕಾರದಿಂದ ಆಗಬೇಕಾದ ಕೆಲಸ ಕಾರ್ಯಗಳು ಶೀಘ್ರಗತಿಯಲ್ಲಿ ಆಗುವಂತೆ ಪ್ರಯತ್ನಿಸುವುದಾಗಿ ಶಾಸಕರು ಜನರಿಗೆ ಭರವಸೆಯಿತ್ತರು.

ತಾ| ರೈತ ಸಂಘದ ನೂತನ ಅಧ್ಯಕ್ಷರಾಗಿ ಚಂದ್ರಶೇಖರ್ ನೂತನಾಧ್ಯಕ್ಷರಿಗೆ [illegible] ಎಂ. ಸುರೇಂದ್ರ [illegible] ವಂದಿಸಿದರು.

(ವರದಿ: ಕೆ.ರಮೇಶ್)

ಸಂಬಂಧಿಗಳ ಹೆಸರಲ್ಲಿ ಜನತಾ ನಿವೇಶನ:

ಭಾರತ್ ರೈಸ್ ಮಿಲ್ಲಿಗೆ ಅಕ್ರಮ ಭೂಮಿ?

ಕೊಪ್ಪ: ಭಾರತ್ ರೈಸ್‌ಮಿಲ್ ಬಳಿ ಸದರಿ ಮಿಲ್ಲಿನ ಮಾಲೀಕರು ಸುಮಾರು ಎರಡು ಎಕರೆ ಜಾಗಕ್ಕೆ ಬೇಲಿ ಮುಂಡು ನಿರ್ಮಿಸಿದ್ದು, ಇದು ಅನಧಿಕೃತ ಎಂಬ ಗುಮಾನಿಯ ಮೇಲೆ ತಾ| ಕಚೇರಿಯಿಂದ ವಿಚಾರಿಸಲಾಗಿ ಈ ಜಾಗವನ್ನು ಕುಟುಂಬದವರಿಗೆ ಅವರ [illegible] ಜನ ಸಂಬಂಧಿಕರ ಹೆಸರಿನಲ್ಲಿ ಜನತಾ ನಿವೇಶನವಾಗಿ [illegible] ಪಡೆದಿರುವುದು ತಿಳಿದು ಬಂದಿದೆಂದು ಕೊಪ್ಪ ಪಂಚಾಯ್ತಿ ಅಧ್ಯಕ್ಷ ಜಿ. [illegible] 'ಮುಂಜಾವು'ಗೆ ತಿಳಿಸಿದ್ದಾರೆ.

"ಈ ಬಗ್ಗೆ ಸದರಿಯವರಿಗೆ ಪಂಚಾಯ್ತಿಯಿಂದ ನೀಡಿದ ೨ ನೋಟೀಸುಗಳಿಗೆ ಉತ್ತರವಿಲ್ಲ; ತಹಸೀಲ್ದಾರರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಜನತಾ ನಿವೇಶನ ಮಂಜೂರಾಗಿ ೨ ವರ್ಷದೊಳಗೆ ಮನೆ ಕಟ್ಟಿಸಿಕೊಳ್ಳದಿದ್ದರೆ ಮಂಜೂರಾತಿ ರದ್ದಾಗುತ್ತದೆ. ಈ ಆಧಾರದ ಮೇಲೆ ಸದರಿ ಜಾಗವನ್ನು ಪಂಚಾಯ್ತಿಯಿಂದ ಸದ್ಯದಲ್ಲೇ ವಶಪಡಿಸಿಕೊಂಡು ನಿವೇಶನರಹಿತ ಅರ್ಹರಿಗೆ ಹಂಚಲಾಗುವುದು" ಎಂದೂ ಸರಪೀರ್ಸ್ರ ತಿಳಿಸಿದ್ದಾರೆ.

ಪ್ರತಿಕ್ರಿಯೆ

ಈ ಬಗ್ಗೆ ಮಿಲ್ಲಿನ ಮ್ಯಾನೇಜರನ್ನು ವಿಚಾರಿಸಿದಾಗ ಸದರಿ ಜಾಗದ ಪಕ್ಕದ ಜಾಗವನ್ನು ಗೋಡೌನ್‌ಗಾಗಿ ಮಂಜೂರು ಮಾಡಿಸಿಕೊಳ್ಳಲಾಗಿದ್ದು, ಪಕ್ಕದ ಈ ತುಂಡು ಜಾಗವನ್ನು ಜನತಾ ನಿವೇಶನವಾಗಿ ಮಂಜೂರು ಮಾಡಿಸಿಕೊಂಡಿರುವುದು ನಿಜವೆಂದೂ, ಆದರೆ ಮಂಜೂರಾತಿ ಪಡೆದವರೆಲ್ಲ ಕೊಪ್ಪದವರೇ, ಕುಟುಂಬದವರಲ್ಲ ಎಂದೂ ತಿಳಿಸಿದ್ದಾರೆ.

ಶಾಸಕರಿಗೆ ಅಭಿನಂದನಾ ಸಮಾರಂಭ

ಕೊಪ್ಪ: ಶೃಂಗೇರಿ ಕ್ಷೇತ್ರದ ಹೊಸ ಶಾಸಕ ಹೆಚ್.ಜಿ.ಗೋವಿಂದ ಗೌಡರನ್ನು ಇಲ್ಲಿನ ತಾ. ಜನತಾ ಸಮಿತಿ ಫೆ. ೧೦ರಂದು ಅಭಿನಂದಿಸಿ ಸತ್ಕರಿಸಿತು. ಎಂ. ಡಿ. ಬಾಲಕೃಷ್ಣ ಅಧ್ಯಕ್ಷತೆ ವಹಿಸಿದ್ದು ಪಿ.ಜಿ.ಗುರ್ಜರ್ ಮುಖ್ಯ ಅತಿಥಿಗಳಾಗಿದ್ದರು.

ತಾ.ಜ.ಸಂ ವತಿಯಿಂದ ಬಿ.ಜಿ.ಚಿದಂಬರ್, ಸಂಘಸಂಸ್ಥೆಗಳ ಪರವಾಗಿ ಯು.ಕೆ. ಶಾಮಣ್ಣ, ಪಂಚಾಯ್ತಿಗಳ ಪರವಾಗಿ ಕೆ. ಎಸ್.ಕೊಲ್ಲಪ್ಪಗೌಡ ಮತ್ತು ಜೆ. ಪಿ. ನೀಲಕಂಠ ಭಟ್ಟ ಹಾಗೂ ಸಾರ್ವಜನಿಕರ ಪರವಾಗಿ ಪಿ.ಜಿ.ಗುರ್ಜರ್ ಶಾಸಕರನ್ನು ಸನ್ಮಾನಿಸಿದರು.

ಗೋವಿಂದ ಗೌಡರು ಮಾತನಾಡಿ, ಎಲ್ಲ ಸೌಕರ್ಯಗಳಿಂದಲೂ ವಂಚಿತವಾಗಿರುವ, ಕ್ಷೇತ್ರದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ತೀವ್ರಗಮನ ಹರಿಸಬೇಕಾಗಿರುವುದನ್ನು ಒತ್ತಿ ಹೇಳಿದರು.

ಮಂಡಳಿ ಉಪಾಧ್ಯಕ್ಷೆ ಸುಮಿತ್ರಮ್ಮ ಸ್ವಾಗತಿಸಿ, ಸದಸ್ಯ ರಾಮಚಂದ್ರನಾಥ್ ವಂದನಾರ್ಪಣೆ ಮಾಡಿದರು.

ಹಾಗೆ, ತುಂಬಿಯೂಗೇಗೆ ಜನತಾ ಸೇವಾ [illegible] ರದ ನಿಷೇಧವಿದ್ದರೂ "ಸಾರ್ವಜನಿಕರು ವಿಶ್ವಾಸ ಪೂರ್ವಕ" ಕೊಟ್ಟದ್ದರಿಂದ ಕೃತಜ್ಞತೆಯಿಂದ ಸ್ವೀಕರಿಸಿದರು.

ಹಾಸ್ಟೆಲ್‌ಗಳ ಅವ್ಯವಸ್ಥೆ ಬಗ್ಗೆ ಎ.ಐ.ಎಸ್.ಎಫ್. ಚಳುವಳಿ

ಕೊಪ್ಪ: ಇಲ್ಲಿನ ಹಿಂದುಳಿದ ವರ್ಗಗಳ (ಬಿಸಿಎಂ) ಹಾಸ್ಟೆಲ್ ಮತ್ತು ಸಾರ್ವಜನಿಕ ಹಾಸ್ಟೆಲ್‌ಗಳಲ್ಲಿ ಅವ್ಯವಸ್ಥೆ, ಅನಾರೋಗ್ಯ, ವಿದ್ಯಾರ್ಥಿಗಳಿಗೆ ವಾರ್ಡನ್‌ಗಳಿಂದ ಕಿರುಕುಳ ನಡೆಯುತ್ತಿದೆಯೆಂದು ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ ಜಿಲ್ಲಾ ಹಿಂದುಳಿದ ಅಲ್ಪಸಂಖ್ಯಾತ ವರ್ಗಗಳ ಅಧಿಕಾರಿಗಳಿಗೆ ದೂರಿದ್ದು, ನಿಷ್ಪಕ್ಷಪಾತ ತನಿಖೆ ನಡೆಸಿ ವಾರ್ಡನ್ ಮತ್ತು ಇತರ ತಪ್ಪಿತಸ್ಥರನ್ನು ವಜಾ ಮಾಡಬೇಕೆಂದು ಒತ್ತಾಯಿಸಿ ಫೆ. ೪ರಂದು ಇಲ್ಲಿನ ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಚೇರಿ ಎದುರು ಸಾಂಕೇತಿಕ ಧರಣಿ ನಡೆಸಿತು. [illegible] ಅವ್ಯವಸ್ಥೆ ಕ್ರಮ ಕೈಗೊಳ್ಳದಿದ್ದರೆ [illegible] ಉಪವಾಸ ಸತ್ಯಾಗ್ರಹ [illegible] ಎಚ್ಚರಿಸಿದೆ.

ಬಳಕೆದಾರರ ವೇದಿಕೆ - ಹಾಗೆಂದರೇನು?

'ಬಳಕೆದಾರರ ವೇದಿಕೆ' ಎಂಬ ಸಂಘಟನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಬೆಳೆಯುತ್ತಿದ್ದು ಬಳಕೆದಾರ-ಪೂರೈಕೆದಾರರ ನಡುವೆ ಕೊಂಡಿಯಾಗಿ, ಬಳಕೆದಾರರ ರಕ್ಷಣೆ ಮತ್ತು ಶಿಕ್ಷಣಕ್ಕೆ ಪ್ರಯತ್ನಿಸುತ್ತಿದೆ. ಯಾರ ವಿರುದ್ಧವೂ ಅಲ್ಲದೆ ದಕ್ಷತೆಯ ಪರವಾದ ಈ ಸಂಘಟನೆಯ ರೀತಿ-ನೀತಿ-ಕಾರ್ಯವಿಧಾನಗಳ ಪರಿಚಯ ಮಾಡಿಕೊಡುವ ಕಾರ್ಯಕ್ರಮಗಳು ಜ. ೧೬ರಂದು ಕೊಪ್ಪ,ಶೃಂಗೇರಿಗಳಲ್ಲಿ ನಡೆದು. ಎರಡೂ ಕಡೆ ಇಂಥವೇ ಸಂಘಟನೆಗಳನ್ನು ರೂಪಿಸುವ ಪ್ರಯತ್ನ ಉತ್ಸಾಹಿಗಳಿಂದ ನಡೆಯುತ್ತಿದೆ.

ಬಳಕೆದಾರ ಎಂದರೆ ಯಾವುದೇ ಒಂದು ವಸ್ತು ಅಥವಾ ಸೇವೆಯನ್ನು ಬಳಸುವವನು. ಉದಾಹರಣೆಗೆ ಅಂಗಡಿಗಳಿಂದ ಸಾಮಾನು ಕೊಳ್ಳುವವರು, ವೈದ್ಯರಿಂದ ಔಷಧಿ ಪಡೆಯುವವರು, ಸರಕಾರಿ, ಅರೆಸರ್ಕಾರಿ ವ್ಯವಸ್ಥೆಗಳ ಸೇವೆಗಳನ್ನು ಬಳಸುವವರು ಇಂಥವರೆಲ್ಲ ಬಳಕೆದಾರರು. ಪೂರೈಕೆದಾರರೆಂದರೆ ಮೇಲಿನ ಉದಾಹರಣೆಗಳಲ್ಲಿ ಕ್ರಮವಾಗಿ ಅಂಗಡಿ ಮಾಲೀಕ, ವೈದ್ಯ, ಸರಕಾರ ಇಂಥವರು.

ಅಂಗಡಿಗಳಲ್ಲಿ ತೂಕದಲ್ಲಿ ಮೋಸ ಮಾಡಬಹುದು, ಕಲಬೆರಕೆ ವಸ್ತುಗಳನ್ನು ಮಾರಬಹುದು; ವೈದ್ಯರು ನಿರ್ಲಕ್ಷ್ಯದಿಂದ ಔಷಧಿ ಕೊಟ್ಟು ರೋಗಿಗೆ ಹಾನಿ ಮಾಡಬಹುದು; ಸರಕಾರಿ ಯಂತ್ರ ತನ್ನ ಭ್ರಷ್ಟತೆ, ಜಡತನಗಳಿಂದಾಗಿ ಪ್ರಜೆಗಳಿಗೆ ನ್ಯಾಯಬದ್ಧವಾಗಿ ದೊರಕಬೇಕಾದ್ದನ್ನೇ ದಕ್ಕದಂತೆ ಮಾಡಬಹುದು. ಇಂಥ ಸಂದರ್ಭಗಳಲ್ಲಿ ಬಳಕೆದಾರರು ತಮ್ಮ ತಪ್ಪಿಲ್ಲದಿದ್ದರೂ ತೊಂದರೆಗಳನ್ನು ಅನುಭವಿಸುತ್ತಾರೆ.

ಬಳಕೆದಾರ-ಪೂರೈಕೆದಾರರ ಸಂಬಂಧಗಳನ್ನು ಆರೋಗ್ಯವಾಗಿಡುವುದು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಬಳಕೆದಾರನಿಗೆ ಶಿಕ್ಷಣ ನೀಡುವುದು (ನೆನಪಿಡಿ: ಬಳಕೆದಾರನ 'ಸೇವೆ' ಮಾಡುವುದಲ್ಲ), ಬಳಕೆದಾರ ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿ ಅವನಿಗೆ ಬೆಂಬಲವಾಗಿ ನಿಲ್ಲುವುದು ಅಥವಾ ಅಂಥಾ ವಿಶಿಷ್ಟ ಸಂದರ್ಭಗಳಲ್ಲಿ ಬಳಕೆದಾರರ ಸಮಸ್ಯೆಗಳನ್ನು ತಾನೇ ಕೈಗೆತ್ತಿಕೊಂಡು ಪರಿಹರಿಸಲು ಪ್ರಯತ್ನಿಸುವುದು—ಇವು ಸುಮಾರಾಗಿ ಬಳಕೆದಾರರ ವೇದಿಕೆಯ ಕೆಲಸಗಳು.

ವೇದಿಕೆ ಯಾಕೆ? 'ವೇದಿಕೆ ಇರುವುದು ಸ್ವಾರ್ಥಕ್ಕೆ' ಎಂಬ ಮಾತು ಅರ್ಧ ತಮಾಷೆ; ಇನ್ನರ್ಧ ಸತ್ಯ. ಭ್ರಷ್ಟಾಚಾರ ತುಂಬಿರುವ ನಮ್ಮ ಸಮಾಜದಲ್ಲಿ ಎಷ್ಟೇ ಪ್ರಯತ್ನಪಟ್ಟರೂ ಪ್ರಾಮಾಣಿಕರಾಗಿ ಬದುಕುವುದು ಅಸಾಧ್ಯವಾಗಿ ಬಿಟ್ಟಿದೆ. ಆದರೆ ಎಷ್ಟೋ ಜನರಿಗೆ ಹೀಗೆ ಮೋಸಮಾಡಿ ಬದುಕುವುದು ಅರಗುತ್ತಿಲ್ಲ. ಲಂಚ ಕೊಡುವುದು - ಪಡೆಯುವುದು, ಹಕ್ಕಿನದನ್ನು ಪಡೆಯಲು ಒಬ್ಬರ ಎದುರಿಗೆ ನಿಂತು 'ಸ್ವಾಮಿ', 'ಸಾಹೇಬರೆ', ಮುಂತಾಗಿ ಹಲ್ಲುಗಿಂಜುವುದು, ಬೆಣ್ಣೆ ಹಚ್ಚುವುದು ಇಂಥವನ್ನೆಲ್ಲ ಇಷ್ಟ ಪಡದವರೂ ಇದ್ದಾರೆ.

ಅಂಥವರು ತಮ್ಮ ಮನಸ್ಸಿಗೆ ಸಂತೋಷ ಕೊಡುವ ಪ್ರಾಮಾಣಿಕತೆ, ಧೀಮಂತಿಕೆ ಇತ್ಯಾದಿಗಳನ್ನು ಉಳಿಸಿಕೊಳ್ಳುವ ಸ್ವಾರ್ಥಕ್ಕಾಗಿ 'ಬಳಕೆದಾರರ ವೇದಿಕೆ'ಯಂಥ ಸಂಘಟನೆಗಳನ್ನು ರೂಪಿಸಿಕೊಂಡಿದ್ದಾರೆ. ಇಂಥ ಸಂಘಟನೆಗಳು ಮುಖ್ಯವಾಗಿ ದ.ಕ.ದಲ್ಲಿ ಹೆಚ್ಚಿದ್ದು. ಉಳಿದ ಕಡೆಗಳಲ್ಲೂ ರೂಪುಗೊಳ್ಳುತ್ತಿವೆ.

ವೇದಿಕೆಯ ಕಾರ್ಯ ವಿಧಾನ:

(ಮುಂದಿನ ವಾರ)

ಗೋವಿಂದ ಗೌಡರು ತುರ್ತಾಗಿ ಮಾಡಬೇಕಾದ್ದು

ಕಳೆದ ಚುನಾವಣೆಯಲ್ಲಿ ಸಚಿವರನ್ನೇ ಪದಚ್ಯುತಿಗೊಳಿಸಿ ಶಾಸಕರಾಗಿರುವ ಗೋವಿಂದ ಗೌಡರಿಗೆ ಇರುವ ಜವಾಬ್ದಾರಿಗಳು ಬಹಳ. ಆದರಲ್ಲಿ ನನ್ನದೊಂದು ಸಲಹೆ:

ಗ್ರಾಮಾಂತರದಲ್ಲಿ ನಿಷ್ಠಾವಂತರೂ ಹಳ್ಳಿಗರ ಸುಖ-ಕಷ್ಟ ಅರಿತಿರುವವರೂ ಜನಾನುರಾಗಿಗಳೂ ಆಗಿರುವವರನ್ನು ಸೇರಿಸಿ, ಒಂದು ಜನತಾ ಸಂಘ ಸ್ಥಾಪಿಸಿ, ಈ ಸಂಘದಿಂದ ಒಬ್ಬರು ಅಥವಾ ಇಬ್ಬರನ್ನು ಹೋಬಳಿ ಸಂಘಕ್ಕೆ, ಅಲ್ಲಿಂದ ಒಬ್ಬಿಬ್ಬರನ್ನು ತಾ|| ಸಂಘಕ್ಕೆ ಸೇರಿಸಬೇಕು. ಇವರು ತಿಂಗಳಿಗೊಮ್ಮೆ ಸಭೆ ಸೇರಿ ಹಳ್ಳಿಗರ ಕಷ್ಟ ಸುಖದ ಬಗ್ಗೆ ವಿಚಾರ ವಿನಿಮಯ ನಡೆಸಿ ಶಾಸಕರಿಗೆ ವರದಿ ಕಳಿಸಬೇಕು. ಅವರು ತಾ|| ಅಧಿಕಾರಿಗಳ ಹಾಗೂ ತಾ|| ಸಮಿತಿಯವರ ಸಭೆ ಸೇರಿಸಿ, ವಿಚಾರ ವಿನಿಮಯ ನಡೆಸಬೇಕು.

ಹೀಗೆ ಮಾಡಿದಲ್ಲಿ ಹಳ್ಳಿಗರ ಸಮಸ್ಯೆ ಬಗೆಹರಿಸಲು ಅನುಕೂಲವಾದೀತೆಂದು ನನ್ನ ನಂಬಿಕೆ.

—ಹೆಚ್.ಎಂ.ಕೃಷ್ಣಮೂರ್ತಿ,
ಹೆಗ್ಗಾರು.

ಧಾರಣೆ ಹೆಚ್ಚಿದರೆ ರೈತನ ಉದ್ಧಾರವೆ?

ಮಾನ್ಯರೆ,

ಸರ್ಕಾರ ಭತ್ತದ ಧಾರಣೆಯನ್ನು ೧೩೦ ರೂ.ಗೆ ನಿಗದಿ ಮಾಡಿರುವುದನ್ನು ಪ್ರತಿಭಟಿಸಲೂ, ಹೆಚ್ಚಿನ ಬೆಲೆ ಬೇಕೆಂತಲೂ ಶೀ ಮೊಗ್ಗೆ(?) ರೈತ ಸಂಘದವರು ಭತ್ತವನ್ನು ಕನ್ನಡ ಜಿಲ್ಲೆಗೆ ಸಾಗಿಸಲು ನಿರ್ಬಂಧ ರದ್ದಿಗೆ ಒತ್ತಾಯಿಸುತ್ತಿದ್ದಾರೆ. ಆದರೆ ಇದರಿಂದ ಬಡವರು ಉದ್ಧಾರವಾಗುವುದಿಲ್ಲ. ಏಕೆಂದರೆ ಬಡವರು (ರೈತರೇ) ಮಾರುವ ಸ್ವಲ್ಪ ಭತ್ತವನ್ನು ಅಲ್ಲಿಗೆ ಒಯ್ಯಲು ಸಾಧ್ಯವಿಲ್ಲ. ಮೋಸದ ವ್ಯಾಪಾರಿಗಳಿಗೋ, ಶ್ರೀಮಂತ ರೈತರಿಗೋ ೧೩೦ ಕ್ಕೋ ಇನ್ನೂ ಕಡಿಮೆಗೋ ಮಾರುತ್ತೇವೆ. ಅವರು ಅದನ್ನು ಲಾರಿಗಟ್ಟಲೆ ಅಲ್ಲಿ ಒಯ್ದು ಮಾರಿ, ಶ್ರೀಮಂತರು ಶ್ರೀಮಂತರಾಗುವರೇ ವಿನಃ ಬಡವರಿಗೆ ಉಪಯೋಗವಿಲ್ಲ.

ಭತ್ತ ಅನೇಕರು (ಮುಖ್ಯವಾಗಿ ಕೂಲಿ ಕಾರ್ಮಿಕರು) ಕೊಂಡು ತಿನ್ನುವ ಪದಾರ್ಥವಾಗಿರುವುದರಿಂದ ಅವರಿಗೆ ಕಷ್ಟವಾಗುತ್ತದೆ. ನಮ್ಮ ಕಷ್ಟ ಒಂದೇ ಅಲ್ಲದೆ ಅವರ ಕಷ್ಟವನ್ನೂ ನಾವು ಯೋಚಿಸಬೇಕು.

ಆದ್ದರಿಂದ ನಾವು ಭತ್ತದ ಬೆಲೆ ಹೆಚ್ಚಿಸಲು ಕೇಳುವುದಕ್ಕಿಂತಲೂ ಗೊಬ್ಬರದ ಕಾರ್ಖಾನೆಯವರಿಂದ ರೈತರಿಗೆ ಸುಲಿಗೆ ತಪ್ಪಿಸಲು ಮತ್ತು ರೈತರ ಅಗತ್ಯ ವಸ್ತುಗಳ ಬೆಲೆ ಇಳಿಸುವ ಬಗ್ಗೆ ಹೋರಾಡಬೇಕು. ಈ ರೀತಿಯಲ್ಲಿ ನಮ್ಮ ಬೆಳೆಯ ಧಾರಣೆ (ಲಾಭಾಂಶ) ಹೆಚ್ಚಿಸಿಕೊಳ್ಳಬೇಕೇ ವಿನಃ ಹೆಚ್ಚು ಹೆಚ್ಚು ಬೆಲೆಗೆ ಮಾರಬೇಕು ಎಂದು ಕೇಳುವುದು ತಪ್ಪು ಎಂದು ನನ್ನ ಅಭಿಪ್ರಾಯ.

— ಹೆಚ್.ವಿ.ನಾಗರಾಜ್,
ಹಾಲ್ಮತ್ತೂರು.

"ಲೆವಿ ಕೊಡಬೇಡಿ"

ಈಗಿನ ಪರಿಸ್ಥಿತಿಯಲ್ಲಿ ಸರ್ಕಾರ ಲೆವಿ ವಸೂಲು ಮಾಡುವುದು ರೈತನಿಗೆ ಮಾರಕವಾಗಿದೆ. ಏಕೆಂದರೆ:

(೧) ಸರ್ಕಾರ ೧ ಕ್ವಿಂಟಾಲ್ ಭತ್ತಕ್ಕೆ ಕೊಡುವ ೧೩೨ ರೂ. ಅಷ್ಟು ಭತ್ತ ಬೆಳೆಯಲು ಬೇಕಾಗುವ ಗೊಬ್ಬರಕ್ಕೂ ಸಾಲುತ್ತದಿಲ್ಲ. ಅಂದ ಮೇಲೆ ನಾವೇಕೆ ನಷ್ಟದಲ್ಲಿ ಸರ್ಕಾರಕ್ಕೆ ಭತ್ತ ಕೊಡಬೇಕು?

(೨) ಲೆವಿ ನಿಗದಿ ಮಾಡುವಾಗ ಈ ಭಾಗದಲ್ಲಿ ಕಳೆದ ಮಳೆಗಾಲದ ಅತಿವೃಷ್ಟಿ, ನೆರೆಗಳಿಂದ ಭತ್ತದ ಫಸಲು ಗಣನೀಯವಾಗಿ ಕಮ್ಮಿಯಾಗಿರುವುದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಆಗ ನಿಜವಾಗಿ ಅಪಾರ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ದೊರಕಿಸಲು ಏನೂ ಮಾಡಲಾಗದ ಅಧಿಕಾರಿಗಳು ಈಗ ಭತ್ತದ ಬೆಳೆ ಬಂದೊಡನೆ ಲೆವಿಗಾಗಿ ಪೀಡಿಸುವುದು, ಸರ್ಕಾರ ವಸೂಲಿ ಮಾಡಲು ಆದೇಶಿಸುವುದು ಖಂಡನೀಯ.

ಆದ್ದರಿಂದ ನಾವು ರೈತರು ಲೆವಿ ಕೊಡದೆ ಈ ಬಗ್ಗೆ ತೀವ್ರ ಪ್ರತಿಭಟನೆ ತೋರಿಸಬೇಕಾಗಿದೆ.

—ಚಾನಲ್ಮನೆ ಸುರೇಶ್‌ನಾಯಕ್.

"ಕುಟುಂಬ ಯೋಜನೆ ಚಿಕಿತ್ಸೆ ಮಾಡಿಸಿಕೊಂಡವರಿಗೆ ಸ್ಟೀಲ್ ತಟ್ಟೆ ವಾಗ್ದಾನ ಈಡೇರಿಲ್ಲ"

ಮಾನ್ಯರೆ,

ದಿ. ೧-೧೧-೮೨ರಂದು ಕೊರ್ಡಕಲ್ಲಿನಲ್ಲಿ ನಡೆದ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ ಶಿಬಿರದಲ್ಲಿ ಭಾಗವಹಿಸಿದವರಿಗೆ ನೂರುರೂ. ನಗದು ಮತ್ತು ಸ್ಟೀಲ್ ತಟ್ಟೆ ಕೊಡುವುದಾಗಿ ಹೇಳಿದ್ದರು. ನಗದು ಹಣ ಬಂದಿದೆಯಾದರೂ ಸ್ಟೀಲ್ ತಟ್ಟೆ ಇನ್ನೂ ಯಾರಿಗೂ ಬಂದಿಲ್ಲ. ಆರೋಗ್ಯ ಇಲಾಖೆ ಹೊಣೆಯೋ ಅಥವಾ ಬಿಡಿಒ ಕಚೇರಿಯಿಂದ ಕೊಟ್ಟಿಲ್ಲವೋ? ಸಂಬಂಧಪಟ್ಟವರು ಈ ಕಡೆ ಗಮನ ಹರಿಸಲಿ.

— ಎಂ. ಎಸ್. ಗಣೇಶ್,
ಶೃಂಗೇರಿ.

ಮೇಲ್ಕಂಡ ವಿಷಯದ ಬಗ್ಗೆ ಶೃಂಗೇರಿ ತಾ|| ಅ|| ಮಂ|| ಕಚೇರಿಯಿಂದ ತಿಳಿದು ಬಂದಿರುವಂತೆ, ಸ್ಟೀಲ್ ತಟ್ಟೆ ವಿತರಣೆಗಾಗಿ ನಿರ್ಣಯ ಮಾಡಲಾಗಿತ್ತು. ಆದರೆ ಇದಕ್ಕಾಗಿ ಬಜೆಟ್‌ನಲ್ಲಿ ನಿಗದಿ ಮಾಡಿದ್ದ ಹಣ ಈಗಾಗಲೇ ಮುಗಿದು ಹೋಗಿದ್ದು, ಬೇರೆ ಯಾವುದಾದರೂ ಬಾಬಿನಿಂದ ಹಣವನ್ನು ಪುನರ್ ಹೊಂದಾಣಿಕೆ ಮಾಡಬೇಕು. ಇದಕ್ಕೆ ಆರೋಗ್ಯಾಧಿಕಾರಿಗಳಿಂದ ಶಸ್ತ್ರಚಿಕಿತ್ಸೆ ಮಾಡಿಸಿ ಕೊಂಡವರ ಪ್ರಮಾಣೀಕೃತ (ಸರ್ಟಿಫೈಡ್) ಪಟ್ಟಿ ಬರಬೇಕು. ಸದ್ಯಕ್ಕೆ ಹಣವಿಲ್ಲದ್ದರಿಂದ ಇವರು ಪಟ್ಟಿ ಕಳಿಸಲು ಒತ್ತಾಯಿಸಿಲ್ಲ.

ತಾ|| ಅ|| ಮಂಡಳಿಯವರು ಪತ್ರ ವ್ಯವಹಾರ, "ಪುಸ್ತಕದ ಹೊಂದಾಣಿಕೆ"ಗಳನ್ನೆಲ್ಲ ಬೇಗ ಮುಗಿಸಿ, ಜನರಿಗೆ ಕೊಟ್ಟ ತಮ್ಮ ಮಾತನ್ನು ಈಡೇರಿಸುವುದು ಸೂಕ್ತ.

ಸಮಯೋಚಿತ ಕ್ರಮ ಸಾರ್ಥಕವಾಗಲು....

ಸ್ವಾಮಿ,

ಕೊಪ್ಪ ತಹಸೀಲ್ದಾರ್‌ರವರು ಜ... 'ಮುಂಜಾವು' ಸಂಚಿಕೆಯಲ್ಲಿ ಭೂ ನ್ಯಾಯ ಮಂಡಲಿ ತೀರ್ಪಿನಂತೆ ಭೂಮಿ ಕಳೆದು ಕೊಂಡವರು ಪರಿಹಾರಧನ ಪಡೆಯಲು ಮಾರ್ಗದರ್ಶನ ಮಾಡಿರುವುದು ಒಂದು ಸಮಯೋಚಿತ ಕ್ರಮ.

ಭೂಮಿ ಕಳೆದುಕೊಂಡರೂ ಭೂಮಾಲೀಕರೆಂಬ ದೊಡ್ಡಸ್ತಿಕೆಯ ಹಣೆ ಪಟ್ಟಿ ಹೊತ್ತಿರುವವರಲ್ಲಿ ಬಹಳಷ್ಟು ಜನರಿಗೆ ದೊರೆಯುವ ಪರಿಹಾರದ ಮೊತ್ತವೆಂದರೆ ಕಛೇರಿಯಲ್ಲಿ ಆ ವಿಭಾಗದ ಗುಮಾಸ್ತರೊಬ್ಬರ

(೪ನೇ ಪುಟಕ್ಕೆ)

ಹುಲ್ಗಾರು ಕೊಂಪೆ!

ಸ್ವಾಮಿ,

ಶಾನುವಳ್ಳಿಯಿಂದ ಹುಲುಗಾರು-ಹಿರೀ ಹುಲುಗಾರು ಮೂಲಕ ಕಾವಡಿ-ಶಾನುವಳ್ಳಿ (ಲಿಂಕ್) ರಸ್ತೆಗೆ ಸೇರುವಂತೆ ರಾ.ಗ್ರಾ.ಉ. ಯೋಜನೆಯನ್ವಯ ರಸ್ತೆ ದುರಸ್ತಿ ಮಾಡಿಕೊಡುವುದಾಗಿ ಗ್ರಾಮ ಪಂಚಾಯ್ತಿ ಮತ್ತು ತಾ.ಅ.ಮಂ.ಸದಸ್ಯರು ಈ ಹಿಂದೆ ತಿಳಿಸಿದ್ದರು. ಆದರೆ ಪ್ರಸ್ತುತ ಈಗ ಜಖಂ ಆಗಿರುವ ರಸ್ತೆಯ ನಾಲ್ಕಾರು ಕಡೆ ಹುಡಿಮಣ್ಣು ಹಾಕಿ ಕಣ್ಣು ಕಟ್ಟುವ ರಿಪೇರಿ ಕೆಲಸ ಆಗಿರುತ್ತೆ. ಇದಕ್ಕೆ ಸಂಬಂಧ ಪಟ್ಟವರು ಹೇಗೂ ಕಂಟ್ರ್ಯಾಕ್ಟ್ ಹಣವನ್ನು ವಿನಿಯೋಗಿಸಿಕೊಂಡು ಆಗಿರಬಹುದು. ಇನ್ನಾದರೂ ನೀರು, ದೀಪ, ದಾರಿ ಕಾಣದ ಈ ಹುಲುಗಾರು ಗ್ರಾಮದ ಅಭಿವೃದ್ಧಿ ಬಗ್ಗೆ ನಮ್ಮ ಮುಖಂಡರುಗಳು ಗಮನ ಹರಿಸಿಯಾರೇ? ಅಥವಾ ನಾವು ಇನ್ನೂ ದಾರಿ, ಕುಡಿಯುವ ನೀರೂ ಸಹ ಇಲ್ಲದ ಕೊಂಪೆಯಾಗಿರಬೇಕೇ? ನಮ್ಮ ಮುಖಂಡರು ಉತ್ತರಿಸಿಯಾರೇ?

ಗ್ರಾಮಸ್ಥರ ಪರವಾಗಿ,
ಹುಲುಗಾರು ಕೆ.ಮೂರ್ತಿ.

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ

ಕೊಪ್ಪ ವಿಭಾಗ, ಕೊಪ್ಪ.

ಸಂಕ್ಷಿಪ್ತ ಪ್ರಕಟಣೆ

ಸಂಖ್ಯೆ: ಟಿಬಿಆರ್–ಎಸ್‌ಎಸ್–ಸಿಆರ್.59/82–83. ದಿನಾಂಕ: 4–2–1983.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಕೊಪ್ಪ ಅರಣ್ಯ ವಿಭಾಗದ ಈ ಕೆಳಕಂಡ ನಾಟಾ ಸಂಗ್ರಹಾಲಯಗಳಲ್ಲಿ ಇರತಕ್ಕ ನಾಟಾಗಳು ಹಾಗೂ ಇತರೆ ಅರಣ್ಯ ಉತ್ಪನ್ನಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಅವರಿಂದ ಅಧಿಕಾರ ಪಡೆದ ಬೇರೆಯವರಾಗಲಿ ಬಹಿರಂಗ ಹರಾಜು ಮೂಲಕ ಮಾರಾಟ ಮಾಡುವರು. ಮಾರಾಟ ಪ್ರತಿದಿನ ಬೆಳಿಗ್ಗೆ 9–30ಕ್ಕೆ ಪ್ರಾರಂಭವಾಗುತ್ತದೆ.

1) ಇಚ್ಛೆಯುಳ್ಳ ಬಿಡ್ಡುದಾರರು ಹರಾಜು ಮಾಡುವ ಅಧಿಕಾರಿಯೊಂದಿಗೆ ಕನಿಷ್ಠ 500 ರೂ.ಗಳನ್ನು ಠೇವಣಿಸಬೇಕು.

2) ಯಶಸ್ವಿ ಸವಾಲುದಾರನು ತಾನು ತೆಗೆದುಕೊಂಡ ನಾಟಾಗಳ ಕಿಮ್ಮತ್ತಿನ 1/4 ಭಾಗ ಹಣವನ್ನು, ಶೇ 8ರಷ್ಟು ಮಾರಾಟ ತೆರಿಗೆ, ಶೇ.8ರಷ್ಟು ಅರಣ್ಯ ಅಭಿವೃದ್ಧಿ ತೆರಿಗೆ, ಎಸ್. ಸಿ. 10ರಷ್ಟು ಮಾರಾಟ ತೆರಿಗೆಯ ಮೇಲೆ ಮತ್ತು ಇತರೆ ಯಾವ ತೆರಿಗೆ ಪೂರ್ತಾ ಹರಾಜು ಮುಗಿದ ತಕ್ಷಣ ಪಾವತಿಸಬೇಕು. ತಪ್ಪಿದಲ್ಲಿ ತಾನು ತೆಗೆದುಕೊಂಡ ನಾಟಾಗಳ ಮೇಲಿನ ಹಕ್ಕನ್ನು ಕಳೆದು ಕೊಳ್ಳುವುದಲ್ಲದೆ ಸದ್ರಿ ಸವಾಲುದಾರನ ಜವಾಬ್ದಾರಿ ಮೇರೆಗೆ ಮರು ಹರಾಜು ಮಾಡಲಾಗುತ್ತದೆ. ಕಟ್ಟಿರುವ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮರು ಹರಾಜಿನಲ್ಲಿ ಸರ್ಕಾರಕ್ಕೆ ಆಗುವ ನಷ್ಟವನ್ನು ಮೂಲ ಸವಾಲುದಾರನು ತುಂಬಿಕೊಡತಕ್ಕದ್ದು.

3) ನಾಟಾ ಮತ್ತು ಅರಣ್ಯ ಉತ್ಪನ್ನಗಳ ಸವಾಲುದಾರರು ಸಂಬಂಧಪಟ್ಟ ಮಾರ್ಕೆಟಿಂಗ್ ಆಫೀಸರ್‌ರವರಿಂದ ಲೈಸೆನ್ಸ್ ಪಡೆದುಕೊಂಡಿರತಕ್ಕದ್ದು.

4) ಹರಾಜಿನ ವಿವರವಾದ ಶರ್ತಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪ ಅಥವಾ ಸಂಬಂಧಿಸಿದ ಡಿಪ್ಪೋ ಅಧಿಕಾರಿಗಳಲ್ಲಿ ಕಾರ್ಯಾಲಯದ ಸಮಯದಲ್ಲಿ ಪಡೆಯಬಹುದು.

ಪರಿಶಿಷ್ಟ

ಕ್ರಮ ಸಂಖ್ಯೆ	ಡಿಪ್ಪೋ ಹೆಸರು	ಹರಾಜಿನ ದಿನಾಂಕ	ನಾಟಾ ಮತ್ತು ಇತರೆ ಅರಣ್ಯ ಉತ್ಪನ್ನದ ಅಂದಾಜು ಪ್ರಮಾಣ			
			ಜಾತಿ	ಲಾಟುಗಳು	ನಾಟಾಗಳು	ಪ್ರಮಾಣ: ಘ.ಮೀ.
1.	ಸರ್ಕಾರಿ ನಾಟಾ ಸಂಗ್ರಹಾಲಯ, **ನರಸಿಂಹರಾಜಪುರ**	22–2–83	ಸಾಗುವಾನಿ	6		20.000
			ಬೀಟೆ	2		3.000
			ಹೊನ್ನೆ	25		80.000
			ನಂದಿ	15		55.000
			ಮತ್ತಿ	30		100.000
			ಹುನಾಲು	20		50.000
			ಜಂಬೆ	40		120.000
			ತಾರೆ	20		50.000
			ಕಾಡುಜಾತಿ	20		80.000
			ಇತರೆ ಜಾತಿ	25		50.000
			ಬೀಟೆ ಬಿಲೆಟ್‌ಗಳು	1		3.000
			ಸ್ಲೀಪರ್ ಪರೋಡ್‌ಗಳು	5		50.000
			ಸಾಗುವಾನಿ ಕಂಬಗಳು ಮತ್ತು ಬಳ್ಳಿಗಳು	150		11000ಸಂಖ್ಯೆ
			ಕಾಡು ಜಾತಿ ಕಂಬಗಳು ಮತ್ತು ಬಳ್ಳಿಗಳು	50		5500 ಸಂಖ್ಯೆ
2.	ಸರ್ಕಾರಿ ನಾಟಾ ಸಂಗ್ರಹಾಲಯ **ಸಂಗನೇಶ್ವರ ಪೇಟೆ**, ಬಾಳೆಹೊನ್ನೂರು ವಲಯ	23–2–83 ಮತ್ತು 24–2–83	ಸಾಗುವಾನಿ		3	0.201
			ಬೀಟೆ		3425	400.866
			ಹೊನ್ನೆ		130	38.136
			ನಂದಿ		110	34.495
			ಮತ್ತಿ		430	220.724
			ಎತ್ತಾಗ		85	48.379
			ಜಂಬೆ		238	120.430
			ಹುನಾಲು		180	90.978

ವಾರ್ಷಿಕೋತ್ಸವಗಳು

ಕೊಪ್ಪ

ಇಲ್ಲಿನ ತೋಮರಶೆಟ್ಟಿ ಹಿ. ಪ್ರಾ. ಶಾಲೆಯ ವಾರ್ಷಿಕೋತ್ಸವ ಫೆ. ೪ ರಂದು ಎಂ. ಎಚ್. ಮಹಮ್ಮದ್ ಸಾದಿಕ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸ॥ ಕಾರ್ಯನಿರ್ವಾಹಕ ಇಂಜನಿಯರ್ ಕೆ. ವಿ. ವೆಂಕಟಯ್ಯ ಮುಖ್ಯ ಅತಿಥಿಗಳಾಗಿದ್ದರು. ಶ್ರೀಮತಿ ರುದ್ರಮ್ಮ ವಾಸುಶೆಟ್ಟಿ ಬಹುಮಾನ ಹಂಚಿದರು. ಶಾಲಾ ತನಿಖಾಧಿಕಾರಿ ಬಿ. ಲಕ್ಷ್ಮೀನಾರಾಯಣ ಮುಖ್ಯಾಯ ಭಾಷಣ ಮಾಡಿದರು. ಬಿ. ರಾಮದಾಸ್ ಸ್ವಾಗತಿಸಿ, ವಿ. ಎ. ಡೋಂಗರೆ ವಂದಿಸಿದರು. ಮಕ್ಕಳಿಂದ ಮೋಹಕ ಮನರಂಜನಾ ಕಾರ್ಯಕ್ರಮ ನಡೆಯಿತು.

ಬೆಳವಿನಕೊಡಿಗೆ

ಇಲ್ಲಿನ ಹಿ.ಪ್ರಾ.ಶಾಲೆ ಮತ್ತು ಪ್ರತಿಭಾ ಮಹಿಳಾ ಸಮಾಜಗಳ ವಾರ್ಷಿಕೋತ್ಸವ ಬಿ.ಜಿ.ಚಿದಂಬರ್ ಅಧ್ಯಕ್ಷತೆಯಲ್ಲಿ ಫೆ.೯ರಂದು ನಡೆಯಿತು. ಹಿರಿಯ ಶಾಲಾ ತನಿಖಾಧಿಕಾರಿ ಬಿ. ಲಕ್ಷ್ಮೀನಾರಾಯಣ ಮತ್ತು ತಾ॥ ಯು॥ ಒಕ್ಕೂಟದ ಅಧ್ಯಕ್ಷ ಹೆಚ್. ಎಂ. ಶ್ರೀಧರ್ ಮುಖ್ಯ ಅತಿಥಿಗಳಾಗಿದ್ದು, ಕೆ.ಎಸ್.ಕಾಡಪ್ಪ ಗೌಡ ಹಾಗೂ ಶ್ರೀಮತಿ ಸಾವಿತ್ರಮ್ಮ ಸುಬ್ಬರಾವ್ ಬಹುಮಾನ ಹಂಚಿದರು. ಸಹಾಯಕ ಅಧ್ಯಾಪಕ ಕುಮಾರ್ ಮತ್ತು ಸಮಾಜದ ಕಾರ್ಯದರ್ಶಿನಿ ನಾಗಲಕ್ಷ್ಮಿ ವರದಿ ಓದಿದರು. ಎ. ವಿಶ್ವೇಶ್ವರಯ್ಯ ಸ್ವಾಗತಿಸಿ ವಂದಿಸಿದರು.

ಕಲ್ಕೆರೆ

ಇಲ್ಲಿನ ಹಿ.ಪ್ರಾ.ಶಾಲೆಯ ವಾರ್ಷಿಕೋತ್ಸವ ಫೆ.೬ರಂದು ಪಿ.ಜಿ.ಗುರ್ಜರ್ ಅಧ್ಯಕ್ಷತೆಯಲ್ಲಿ ನಡೆಯಿತು. ಟಿ.ವಿ.ನರಸಿಂಹ ಹೇರಳೆ ಮತ್ತು ಡಾ॥ ಎಸ್.ವಿ.ಮಲ್ಲಿಕಾರ್ಜುನ ಭಟ್ಟ ಮುಖ್ಯ ಅತಿಥಿಗಳಾಗಿದ್ದ ಈ ಸಮಾರಂಭವನ್ನು ಶಾಲಾ ತನಿಖಾಧಿಕಾರಿ ಎ. ಆರ್.ಶ್ರೀನಿವಾಸ್ ಉದ್ಘಾಟಿಸಿದರು. ಶಾಲಾ ಮಕ್ಕಳಿಗೆ ಬಹುಮಾನಗಳನ್ನೂ ಶಿಶು ವಿಹಾರದ ಸುಮಾರು ೩೦ ಮಕ್ಕಳಿಗೆ ಉತ್ತೇಜಕ ಬಹುಮಾನಗಳನ್ನೂ ಪಂಚಾಯ್ತಿ ಅಧ್ಯಕ್ಷ ಯು.ವಿ.ಶ್ರೀನಿವಾಸರಾವ್ ಹಂಚಿದರು. ಮಕ್ಕಳಿಂದ ಮನರಂಜನಾ ಕಾರ್ಯಕ್ರಮ ನಡೆಯಿತು.

ಇಲ್ಲಿನ ಯುವಕ ರೈತ ಸಂಘ ಮತ್ತು ಮಾದರಿ ಮಹಿಳಾ ಸಮಾಜಗಳ ವಾರ್ಷಿಕೋತ್ಸವ ಬಿ.ಜಿ.ಚಿದಂಬರ್ ಅಧ್ಯಕ್ಷತೆಯಲ್ಲಿ ಫೆ.೮ರಂದು ನಡೆಯಿತು. ಇದೇ ಸಂದರ್ಭದಲ್ಲಿ ಮಹಿಳಾ ಸಮಾಜದ ಹೊಸ ಕಟ್ಟಡವನ್ನು ಹೆಚ್.ಜಿ.ಗೋವಿಂದ ಗೌಡ ಉದ್ಘಾಟಿಸಿದರು. ಕ್ಷೇತ್ರಾಭಿವೃದ್ಧಿ ಅಧಿಕಾರಿ ಬಾಲಣ್ಣ ಗೌಡ, ಮಳಿಗೆ ಚಂದ್ರಶೇಖರ್, ಕೆ.ಎಸ್.ಕಾಡಪ್ಪ ಗೌಡ, ಯು.ವಿ.ಶ್ರೀನಿವಾಸ ರಾವ್ ಮುಖ್ಯ ಅತಿಥಿಗಳಾಗಿದ್ದರು. ಕ್ಷೇ. ಅಧಿಕಾರಿ ಹಾಗೂ ಶಾಸಕರಿಗೆ ಮನವಿ ಪತ್ರಗಳನ್ನು ಸಲ್ಲಿಸಲಾಯಿತು. ಎಸ್.ರವಿ ವಂದನಾರ್ಪಣೆ ಮಾಡಿದರು.

'ಪ್ರಾರಬ್ಧ ಕರ್ಮ' ಮತ್ತು 'ಅಡ್ಡಗೋಡೆ' ಎಂಬ ನಾಟಕಗಳು ಅಭಿನಯಿಸಲ್ಪಟ್ಟವು.

ದಲಿತ ಮಹಿಳೆ ಮೇಲೆ ಹಲ್ಲೆ: ಸಂಘರ್ಷ ಸಮಿತಿ ಖಂಡನೆ

ಕೊಪ್ಪ: "ಹರಿಹರಪುರ ಹೋಬಳಿ ತನುಡವಳ್ಳಿ ಗ್ರಾಮದ ನಗಳಿಯ ದೇವಿ ಎಂಬ ದಲಿತ ಯುವತಿಯ ಮೇಲೆ ೨೭-೧೨-೮೨ ರಂದು ಹಲ್ಲೆ ನೆಡೆದಿದ್ದು ಈ ಬಗ್ಗೆ ಕೊಪ್ಪ ಠಾಣಾಧಿಕಾರಿಯವರಿಗೆ ೨೮-೧೨-೮೨ರಂದು ದೂರು ಸಲ್ಲಿಸಿದ್ದರೂ ಅವರು ಇದುವರೆಗೂ ತನಿಖೆ ನೆಡೆಸಿಲ್ಲ. ಬಡವರ ಬಗ್ಗೆ ಪೋಲೀಸು ಅಧಿಕಾರಿಗಳ ಈ ಜಡತೆಯನ್ನು ಕೊಪ್ಪ ತಾ॥ ದಲಿತ ಸಂಘರ್ಷ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನೆಡೆಸಿ ಕಾನೂನಿನ ಅಡಿಯಲ್ಲಿ ದಲಿತರ ಮಾನ-ಪ್ರಾಣಗಳಿಗೂ ರಕ್ಷಣೆ ಇದೆ ಎಂಬುದನ್ನು ತೋರಿಸಿಕೊಡಲಿ" ಎಂದು ಕೊಪ್ಪ ತಾ॥ ದಲಿತ ಸಂಘರ್ಷ ಸಮಿತಿ ಪ್ರಕಟಣೆಯೊಂದರಲ್ಲಿ ಒತ್ತಾಯಿಸಿದೆ.

ಸಮಯೋಚಿತ ಕ್ರಮ

(೨ನೇ ಪುಟದಿಂದ)

೨-೩ ತಿಂಗಳ ಅಸಲು ಸಂಬಳದ ಮೊತ್ತಕ್ಕಿಂತ ಕಡಿಮೆಯದು. ಆದರೆ ಇದನ್ನು ಪಡೆಯಲು ಒದಗಿಸಬೇಕಾದ ದಾಖಲೆಗಳನ್ನು ಪಡೆಯುವುದು ಅನೇಕರಿಗೆ ತೀರ ಕಷ್ಟದ ವಿಷಯ. ಈ ಬವಣೆಯಿಂದ ಬೇಸತ್ತು ಅದಕ್ಕಾಗಿಯೇ ಇರುವ ವಿಶೇಷ ದಳ್ಳಾಳಿಯ ಹಿಡಿತಕ್ಕೆ ಸಿಗುವುದು ಅನಿವಾರ್ಯ. ಆದರೆ ಕಳೆದುಕೊಂಡ ತನ್ನ ಸರ್ವಸ್ವವಾದ ಭೂಮಿಯ ಜೊತೆಗೆ ಅದರ ಅಸ್ಪಿಷ್ಟು ಪರಿಹಾರದ ಹಣದ ದೊಡ್ಡ ಪಾಲನ್ನೇ ದಳ್ಳಾಳಿಯ ಮೂಲಕ ದಕ್ಷಿಣೆಯಾಗಿ ಧಾರೆ ಎರೆದು ಉಳಿದದ್ದಾದರೂ ಸಿಕ್ಕಿತಲ್ಲ, ಎಂದುಕೊಳ್ಳುವ ದುಸ್ಥಿತಿ ತಪ್ಪಿ ಪೂರ್ತಿ ಹಣ ಪಡೆಯುವಂತಾದರೆ ಅಧಿಕಾರಿಗಳ ಈ ಕ್ರಮ - ಸಾರ್ಥಕವಾದೀತು. ಪರಿಹಾರ ಪಡೆಯ ಬೇಕಾದವರು ಕೂಡ ಅಧಿಕಾರಿಗಳೇ ಸೂಚಿಸಿದಂತೆ ನೇರವಾಗಿ ಅವರನ್ನೇ ಕಂಡು ತಮ್ಮ ತೊಂದರೆಗಳನ್ನು ಅವರ ಗಮನಕ್ಕೆ ತಂದು ತಮ್ಮ ನ್ಯಾಯಯುತ ಬೇಡಿಕೆ ಪೂರೈಸಿ ಮಾಡಿಕೊಳ್ಳುವ ಧೈರ್ಯ ತೋರಿಸಬೇಕು. ಇದಕ್ಕೆ ತಹಶೀಲ್ದಾರರು ಸೂಕ್ತ ಅವಕಾಶ ನೀಡಲಿ.

—**ಹರಿಹರಪುರ ಬಿ.ಸುಬ್ರಹ್ಮಣ್ಯಂ.**
ಬೆಂಗಳೂರು.

ಗಣರಾಜ್ಯೋತ್ಸವ

ಹುಲುಕೋಡು (ಹಾಲ್ಮತ್ತೂರು): ಇಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಹೆಚ್.ಎ.ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಉಪಾಧ್ಯಾಯರು ಸ್ವಾಗತಿಸಿ ವಂದಿಸಿದರು. ಶಾಲಾ ಮಕ್ಕಳಿಗೆ ಗಣರಾಜ್ಯದ ಬಗ್ಗೆ ಉಪಾಧ್ಯಾಯರು, ಅಧ್ಯಕ್ಷರು ತಿಳಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ.

ಸಾರ್ವಜನಿಕರ ಅವಗಾಹನೆಗೆ

6-2-83ರ 'ಮುಂಜಾವು' ಪತ್ರಿಕೆಯಲ್ಲಿ 'ಎಚ್ಚರಿಕೆ' ಎಂಬ ತಲೆ ಬರಹದಡಿ ಪ್ರಕಟವಾಗಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಕೊಪ್ಪ ಮೇಲಿನ ಪೇಟೆಯಲ್ಲಿರುವ (3)541 ನಂಬರಿನ ಮನೆಯನ್ನು ನಾನು 1981ರಲ್ಲಿ ಶಿವಮೊಗ್ಗದ ಶ್ರೀ ಸತ್ಯನಾರಾಯಣ ಎಂಬವರಿಂದ ಕ್ರಯಕ್ಕೆ ಕೊಂಡಿರುತ್ತೇನೆ. ಈ ಮನೆಗೆ ಸಂಬಂಧಪಟ್ಟಂತೆ ದಾಖಲಾತಿಗಳೆಲ್ಲವೂ ಶ್ರೀ ಸತ್ಯನಾರಾಯಣ ಅವರ ಹೆಸರಿನಲ್ಲಿದ್ದು, ದಾಖಲೆಗಳನ್ನೆಲ್ಲ ಕ್ರಮಬದ್ಧವಾಗಿ ಪರಿಶೀಲಿಸಿಯೇ ಕೊಂಡಿದ್ದಾಗಿರುತ್ತೆ. ಈ ದಾಖಲೆಗಳ ಪ್ರಕಾರ ಸದರಿ ಕೆ.ಆರ್.ಶೀನಪ್ಪನವರಿಗೆ ಈ ವ್ಯವಹಾರದಲ್ಲಿ ಯಾ ಮನೆಯಲ್ಲಿ ಯಾವುದೇ ಹಿಸ್ಸೆಯಾಗಲೀ ಹಕ್ಕಾಗಲೀ ಇರುವುದಿಲ್ಲ. ಸದರಿ (3)541 ನಂಬರಿನ ಮನೆಯನ್ನು ನಾವು ಕ್ರಯಕ್ಕೆ ಕೊಂಡಿರುವುದು ಕ್ರಮಬದ್ಧವಾಗಿರುತ್ತೆ ಎಂದು ಈ ಸಂಬಂಧವಾಗಿ ಸಾರ್ವಜನಿಕರಲ್ಲಿ ಉಂಟಾಗಿರಬಹುದಾದ ತಪ್ಪು ಅಭಿಪ್ರಾಯವನ್ನು ನಿವಾರಿಸುವ ಸಲುವಾಗಿ ಈ ಪ್ರಕಟಣೆ ಕೊಟ್ಟಿರುತ್ತೆ.

ಕೆ. ಮಾಧವ ಕಿಣಿ,
ವ್ಯಾಪಾರ, ಮೇಲಿನ ಪೇಟೆ, ಕೊಪ್ಪ.

ಕರ್ನಾಟಕ ಅರಣ್ಯ ಇಲಾಖೆ

(೩ನೇ ಪುಟದಿಂದ)

ಸಂಕ್ಷಿಪ್ತ ಪ್ರಕಟಣೆ

ಕ್ರಮ ಸಂಖ್ಯೆ	ಡಿಪೋ ಹೆಸರು	ಹರಾಜಿನ ದಿನಾಂಕ	ನಾಟಾ ಮತ್ತು ಇತರೆ ಅರಣ್ಯ ಉತ್ಪನ್ನದ ಅಂದಾಜು ಪ್ರಮಾಣ: ಜಾತಿ	ಲಾಟುಗಳು	ನಾಟಾಗಳು	ಪ್ರಮಾಣ:ಘ.ಮೀ.
2.	ಸರ್ಕಾರಿ ನಾಟಾ ಸಂಗ್ರಹಾಲಯ **ಸಂಗಮೇಶ್ವರ ಪೇಟೆ** ಬಾಳೆಹೊನ್ನೂರು ವಲಯ	23-2-83 ಮತ್ತು 24-2-83	ಇತರೆ ಜಾತಿ		300	160.264
			ಸೌದೆ			13.20 ಟನ್
	ತಪ್ಪಿತಸ್ಥರ ಲಾಟುಗಳು		ನಾಟ		51	24.187
			ಸಾಗುವಾನಿ ಕಂಬ			137 ಸಂಖ್ಯೆ

(ಸಹಿ) **ಕೆ.ಸುಂದರ ನಾಯ್ಕ್**
ಉಪ ಅರಣ್ಯ ಸಂರಕ್ಷಣಾಧಿಕಾರಿ
ಕೊಪ್ಪ ವಿಭಾಗ, ಕೊಪ್ಪ.